

ಡಾ.ವಿನೋದ ಛೆಬ್ಬಿ

ಕೊನೆಯ ದಿನಗಳಲ್ಲಿ ನನ್ನಲ್ಲೇನಿದೆ ಎನ್ನುವುದಲ್ಲ, ನನ್ನವರು ಯಾರು ಜೊತೆಗಿದ್ದಾರೆ ಎನ್ನುವುದು ಮುಖ್ಯವಾಗುತ್ತದೆ.

# 346: ಹೊಸ ದಾರಿ - 86

ಸಾಂಗತ್ಯ ಬಯಸಿ ಹಲವಾರು ಪುರುಷರು ಮುಂದೆ ಬಂದಿದ್ದಾರೆ, ಆದರೆ ಮಹಿಳೆಯರು ಮಾತ್ರ ಒಬ್ಬರೂ ಇಲ್ಲ ಎಂದು ಮುಂಚೆ ಹೇಳಿದ್ದೆ. ಇದರ ಒಳಾರ್ಥವನ್ನು ಬಗೆದಷ್ಟೂ ಒಳಪದರಗಳು ಬಿಚ್ಚಿಕೊಳ್ಳುತ್ತಿವೆ. ಅದರಲ್ಲೊಂದು ಎಂದರೆ ಹಿರಿಯ ಗಂಡಸರಲ್ಲಿ ಸಂಗಾತಿಯಿದ್ದೂ ಇಲ್ಲದಂತಾಗಿ ಒಂಟಿಯಾಗಿರುವವರು. ಈ ಸಲ ಇವರನ್ನೇ ಉದ್ದೇಶಿಸಬೇಕೆನಿಸಿದೆ.

ಬಾಲ್ಯದಲ್ಲಿ ಆತ್ಮೀಯರಿಂದ ಸಂಪರ್ಕ, ಸ್ಪರ್ಶ ಸಂವೇದನೆ ಸಿಗದಿದ್ದರೆ ತಾನ್ಯಾರೆಂಬುದು ಸ್ಪಷ್ಟವಾಗದೆ ತನ್ನ ಬದುಕಿರುವುದರ ಬಗೆಗೆ ಶಂಕೆಯಾಗುತ್ತ ಅನಾರೋಗ್ಯ ವ್ಯಕ್ತಿತ್ವ ಉಂಟಾಗುತ್ತದೆ ಎಂದು ಈಗಾಗಲೇ ಅರಿತಿದ್ದೇವೆ. ಈ ದುರ್ಬಿನಿನ ಮೂಲಕ ಒಂಟಿ ಗಂಡಸರನ್ನು ನೋಡಿದರೆ ಏನು ಅರ್ಥವಾಗುತ್ತದೆ? ಅವರು ಮಗುವಾಗಿರುವಾಗ ಭದ್ರ ಬಾಂಧವ್ಯಕ್ಕೆ ಹಂಬಲಿಸಿದ್ದಾರೆ. ಬಯಸಿ ಸಿಗದಿರುವಾಗ ಆಗುವ ಆಘಾತಕ್ಕೆ ಭಯಪಟ್ಟು ಪ್ರಯತ್ನಿಸುವುದನ್ನೇ ನಿಲ್ಲಿಸಿದ್ದಾರೆ. ಹಾಗಾದರೆ ಇವರು ಬದುಕಿರುವ ಗುಟ್ಟೇನು? 'ಮೂಲತಃ ತಾನು ಹೀಗೆ' ಎಂಬುದನ್ನು ವ್ಯಕ್ತಪಡಿಸಿ ಆತ್ಮಗೌರವ ಹೊಂದಲು ಸಾಧ್ಯವಾಗದಿರುವುದರಿಂದ ತಾನು ಹೊರುವ ಜವಾಬ್ದಾರಿ ಹಾಗೂ ಪೂರೈಸುವ ಕರ್ತವ್ಯಗಳ ಮೂಲಕ ತಮ್ಮನ್ನು ಗುರುತಿಸಿಕೊಂಡಿರುತ್ತಾರೆ (ಹೆಂಗಸರಲ್ಲೂ ಇದು ಧಾರಾಳವಾಗಿದೆ). ಇಂಥವರಲ್ಲಿ ಬಾಂಧವ್ಯ ಪ್ರಜ್ಞೆಯ ಜಾಗದಲ್ಲಿ ಕರ್ತವ್ಯಪ್ರಜ್ಞೆ ಎಷ್ಟರ ಮಟ್ಟಿಗೆ ಮೆರೆಯುತ್ತದೆಂದರೆ, ಕಾಮಕೂಟವೆಂದರೆ ಹೆಂಡತಿಯನ್ನು ತೃಪ್ತಿಪಡಿಸುವ ಕರ್ತವ್ಯವೆಂದು ಭಾವಿಸುತ್ತಾರೆ.

ಇವರಲ್ಲೂ ಕೆಲವರು ವಿಚಿತ್ರ ವ್ಯಕ್ತಿತ್ವವನ್ನು ಬೆಳೆಸಿಕೊಂಡವರಿದ್ದಾರೆ. ಉದಾಹರಣೆಗೆ, ಆತ್ಮರತಿ (ನನ್ನನ್ನು ಬಿಟ್ಟು ಬೇರಿಲ್ಲ, ಎಲ್ಲರೂ ನನಗೋಸ್ಕರವೇ ಇರುವುದು), ವಿಷಮ ಪುರುಷತ್ವ (ಹೆಣ್ಣನ್ನು ಆಳುವುದೇ ನಿಜವಾದ ಗಂಡಿನ ಲಕ್ಷಣ), ಸ್ತ್ರೀ ದ್ವೇಷ/ ಕೀಳುಭಾವ (ಹೆಣ್ಣು ಗಂಡಿನ ಸೇವೆ ಹಾಗೂ ಭೋಗಕ್ಕಾಗಿ ಹುಟ್ಟಿದವಳು) ಮುಂತಾದವುಗಳನ್ನು ಸಿದ್ಧಾಂತವಾಗಿ ನಂಬಿದವರು. ಇಂಥ ನಿಲುವನ್ನು ಇಟ್ಟುಕೊಂಡು ಸಂಬಂಧ ಕಟ್ಟಿಕೊಳ್ಳಲು ನೋಡಿ, ಅದು ಕೆಲಸ ಕೊಡದಿರುವಾಗ ಇನ್ನಷ್ಟು ಒತ್ತಾಯ ತಂದಿದ್ದಾರೆ. ಇದನ್ನರಿತ ಹೆಣ್ಣು ಇವರಿಂದ ಕಳಚಿಕೊಂಡು, ಸ್ವಾಯತ್ತತೆಯನ್ನು ಘೋಷಿಸಿ ಸ್ವಾವಲಂಬಿಯಾದಾಗ ಆಕೆ ಕೈಕೊಟ್ಟು ತನ್ನನ್ನು ಒಂಟಿಯಾಗಿ ಮಾಡಿದಳೆಂದು ಗೋಳಾಡುತ್ತಾರೆ. (ವಿಚಿತ್ರವೆಂದರೆ, ತನ್ನನ್ನು ಬಿಟ್ಟವಳು ಒಂಟಿಯಾದರೂ ಹೇಗೆ ವಿಜೃಂಭಿಸುತ್ತಿದ್ದಾಳೆ ಎನ್ನುವುದು ಇವರಿಗೆ ಅರ್ಥವಾಗುವುದಿಲ್ಲ!) ಸಂಗಾತಿಯನ್ನು ಹದ್ದುಬಸ್ತಿನಲ್ಲಿಟ್ಟುಕೊಂಡು ಸಂಬಂಧ ಕಟ್ಟಿಕೊಳ್ಳುವ ಇವರ ತಂತ್ರ ಬುಡಮೇಲಾಗಿ ವಯಸ್ಸಾದಂತೆ ಅವರೇ ಹೆಂಡತಿಯ ಅಧೀನದಲ್ಲಿರುವಂತಾಗಿದೆ. ಒಳಗೊಳಗೇ ಸ್ಪರ್ಶ–ಪ್ರೀತಿಗಾಗಿ ಹಂಬಲಿಸಿ, ಅದಕ್ಕಾಗಿ ಹಕ್ಕೊತ್ತಾಯ ಮಾಡಿಯೂ ಸಿಗದೆ ನವೆದು, ಪರಿಣಾಮವಾಗಿ ಕಾಯಿಲೆಗಳನ್ನು ಬರಮಾಡಿಕೊಂಡಿದ್ದಾಗಿದೆ. ಇಳಿಯವಸ್ಸಿನಲ್ಲಿ ಇವರ ದಾಂಪತ್ಯ ಸಂಬಂಧ ಹೇಗಿರಬಹುದು ಎನ್ನುವುದಕ್ಕೆ ಒಂದು ದೃಷ್ಟಾಂತ:

ಈ ಹಿರಿಯ ಗಂಡಸು ಕಾಯಿಲೆಗೆ ಒಳಗಾಗಿ ಸುಮಾರು ಕಾಲವಾಯಿತು. ಹೆಂಡತಿಯು ಮೊದಲಿನಿಂದಲೂ ತಾನು ಹೇಳಿದಂತೆ ಕೇಳುತ್ತಿಲ್ಲ, ಹಾಗಾಗಿಯೇ ಕಾಯಿಲೆಗಳು ಬಂದಿವೆಯೆಂದು ಇವರ ದೂರು. ಆದರೆ ಹೆಂಡತಿ ಹೇಳುವುದೇನು? 'ಗಂಡ ಯಾವೊತ್ತೂ ನನ್ನನ್ನು ಅಪನಂಬಿಕೆಯಿಂದಲೇ ನೋಡಿದ್ದಾರೆ. ಸೇವೆ ಮಾಡಿದಷ್ಟೂ ಇವರ ದರ್ಬಾರು ಹೆಚ್ಚಾಗಿದೆ. ನಾನಂತೂ ಕೊಟ್ಟೂ ಕೊಟ್ಟೂ ಖಾಲಿಯಾದ್ದೇನೆ. ಇವರಿರುವ ತನಕ ನೋಡಿಕೊಳ್ಳುವುದು ಕರ್ತವ್ಯವೆಂದು ನಿರ್ಣಯಿಸಿದ್ದೇನೆ'. ಇಲ್ಲಿ ಗಂಡನ ಒಂಟಿತನಕ್ಕೆ ಕಾರಣ ಸ್ಪಷ್ಟವಾಗಿದೆ: ಗಂಡಸುತನದ ಕಾರಣದಿಂದಲೇ ಸಂಗಾತಿಯಿಂದ ದೂರೀಕರಣ, ಫಲವಾಗಿ ದೀರ್ಘಕಾಲೀನ ಖಿನ್ನತೆ ಹಾಗೂ ಕಾಯಿಲೆಗಳ ಆಕ್ರಮಣ!

ಇಳಿವಯಸ್ಸಿನಲ್ಲಿ ಸಂಗಾತಿಯಿದ್ದೂ ಒಂಟಿತನ ಅನುಭವಿಸುತ್ತಿರುವ ಗಂಡಂದಿರ ಸಮಸ್ಯೆಗೆ ಪರಿಹಾರವೇನು?

ಸಂಬಂಧವನ್ನು ಪುನಃ ಜೋಡಿಸುವುದು ಎಂದರೆ ಹೆಣ್ಣಿನ ಅರ್ಥದಲ್ಲಿ ಎಂದರೆ ಪುನಃ ಗಂಡನ ಯಜಮಾನಿಕೆಗೆ ಶರಣಾಗುವುದು – ಇದು ಹೆಣ್ಣಿನ ಮೈಮೇಲೆ ಮುಳ್ಳು ತರಿಸುತ್ತದೆ. ಹೆಂಡತಿಯ ಸ್ವತಂತ್ರ ನಿಲುವನ್ನು ಒಪ್ಪಿಕೊಳ್ಳುವ ಬಗೆಗೆ ಒಬ್ಬರಿಗೆ ಹೇಳಿದಾಗ ಏನೆಂದಿದ್ದಾರೆ? 'ಎಲ್ಲಿ ಬೇಕಾದರೂ ಹೋಗು, ನನ್ನ ಒಪ್ಪಿಗೆಯಿದೆ, ಹಣ ನಾನು ಕೊಡುತ್ತೇನೆ, ಆಯ್ತಾ?' ವಿಪರ್ಯಾಸವೆಂದರೆ, ಹೀಗೆನ್ನುವುದರಲ್ಲೇ ಯಜಮಾನಿಕೆ ಇದೆ: ಹಣ, ನಾನು, ಕೊಡುತ್ತೇನೆ – ಈ ಮೂರು ಪದಗಳು ಏನು ಸೂಚಿಸುತ್ತವೆ? ಇನ್ನೊಬ್ಬ ಹಿರಿಯರು ಹೆಂಡತಿಯನ್ನು ನಂಬದೆ ಮಗನ ಹೆಸರಿಗೆ ಆಸ್ತಿಯನ್ನು ವರ್ಗಾಯಿಸಿ, ಅವನು ಅವ್ಯವಹಾರದಿಂದ ಕಳೆದುಕೊಂಡಾಗ ಬೀದಿಗೆ ಬಿದ್ದಿದ್ದು, ಮಗನನ್ನು ಸರಿಯಾಗಿ ಬೆಳೆಸಲಿಲ್ಲವೆಂದು ಹೆಂಡತಿಯನ್ನು ದೂರುತ್ತಿದ್ದಾರೆ– ಮಗ ಬೆಳೆಯುವಾಗ ಇವರೇನು ಕೊಡುಗೆ ಕೊಟ್ಟರು ಎಂಬುದನ್ನು ಯೋಚಿಸುವ ಗೋಜಿಗೆ ಹೋಗಿಲ್ಲ.

ಇವರಲ್ಲಿ ಇನ್ನೊಂದು ಗುಣ ಎದ್ದುಕಾಣುತ್ತದೆ:

ಇವರು ಹಣಕ್ಕೆ, ಆಸ್ತಿಗೆ ಅತಿ ಮಹತ್ವ ಕೊಡುತ್ತಾರೆ. ಇದರಲ್ಲಿ ತಪ್ಪೇನಿಲ್ಲವಾದರೂ ಅದನ್ನು ತಮ್ಮ ಹೆಸರಲ್ಲೇ ಇಟ್ಟುಕೊಂಡಿರುವುದು ಒಗಟಾಗುತ್ತದೆ. ಇಂಥವರಿಗೆ ನನ್ನ ನೇರಪ್ರಶ್ನೆ: ನಿಮ್ಮ ಭಯವೇನು? ಹಣ, ಅಧಿಕಾರ ಬಿಟ್ಟುಕೊಟ್ಟರೆ ಅಭದ್ರತೆಯೆಂದು ಭಾವಿಸಿದ್ದೀರಿ. ಭದ್ರತೆಯ ಭಾವವು ಹಣದಿಂದಲ್ಲ, ಸಂಗಾತಿಯಿಂದ ಬರಬೇಕು. ಕೊನೆಯ ದಿನಗಳಲ್ಲಿ ಹಣವಿಲ್ಲದಿದ್ದರೆ ಯಾರು ನೋಡಿಕೊಳ್ಳುತ್ತಾರೆ ಎನ್ನುವ ಭಯ ನಿಜ; ಆದರೆ ನೋಡಿಕೊಳ್ಳುವುದು ನಿಮ್ಮ ಹಣವಲ್ಲ – ಅದು ಅನುಕೂಲತೆಗಳನ್ನು ಮಾತ್ರ ಕಲ್ಪಿಸಿಕೊಡುತ್ತದೆ. ಹಣ ಮಾತ್ರವಿದ್ದು ನೋಡಿಕೊಳ್ಳುವವರು ಇಲ್ಲದಿದ್ದರೆ ಏನು ಮಾಡುವಿರಿ? ಹೆಚ್ಚೆಂದರೆ, ಹಣಕ್ಕಾಗಿ ನೋಡಿಕೊಳ್ಳುವವರು ಸಿಗಬಹುದು. ಇಲ್ಲಿಯೂ ಅಂತಃಕರಣವಿಲ್ಲ. ಹಾಗೆಂದು ಎಷ್ಟೆಂದು ಅಧಿಕಾರ ನಡೆಸುತ್ತೀರಿ? ಮುಂದೊಂದು ಕಾಲದಲ್ಲಿ ಸೂರನ್ನು ನೋಡುತ್ತ ಅಸಹಾಯಕರಾಗಿ ಮಲಗಿದಾಗ ಹಳೆಯ ಹೆಂಡತಿಯ ಪಾದವೇ ಗತಿ! ಅಷ್ಟು ಹೀನಾಯ ಆಗುವುದಕ್ಕಿಂತ ಮುಂಚೆಯೇ ಗೌರವ ಪೂರ್ವಕವಾಗಿ ಹಣದ ಅಧಿಕಾರವನ್ನು ಸಂಗಾತಿಗೆ ವರ್ಗಾಯಿಸಿ. (ಹಣವನ್ನು ಎಲ್ಲಿ ತವರಿಗೆ ಸಾಗಿಸುತ್ತಾಳೋ ಎಂದೆನಿಸಿದರೆ, ಕೊಟ್ಟು ನೋಡಿ: ಅವಳು ನಿಮ್ಮನ್ನು ನೋಡಿಕೊಳ್ಳುವುದರಲ್ಲಿ ಅಂತಃಕರಣ ಕಾಣುತ್ತದೆ.) ನೆನಪಿಡಿ: ಬಿಟ್ಟುಕೊಡದೆ ಸುಸಂಬಂಧ ಸಾಧ್ಯವಿಲ್ಲ!

ಸಂಗಾತಿಯೊಡನೆ ಸಂಬಂಧದ ಪುನರುತ್ಥಾನ ಮಾಡಲು ಏನು ಮಾಡಬಹುದು? ಮೊದಲು ಬ್ಯಾಂಕ್ ಖಾತೆಯಲ್ಲಿ ಹಾಗೂ ಆಸ್ತಿಯಲ್ಲಿ ಸಂಗಾತಿಯ ಹೆಸರು ಹಾಕಿಸಿ. ನಿಮ್ಮ ಆರ್ಥಿಕ ವ್ಯವಹಾರವನ್ನು ಆಕೆಯೆದುರು ತೆರೆದಿಡಿ. ನಂತರ ಅವಳೊಡನೆ ಕುಳಿತುಕೊಂಡು ವಿನೀತಭಾವದಿಂದ ಈ ಧಾಟಿಯಲ್ಲಿ ಮಾತಾಡಿ:

- ನನಗೆ ತಿಳಿದಂತೆ ಸಂಬಂಧ ಕಟ್ಟಿಕೊಳ್ಳಬೇಕೆಂದು ಇದುವರೆಗೂ ನಾನಾ ತಂತ್ರಗಳನ್ನು ಉಪಯೋಗಿಸಿದ್ದೇನೆ. ಅವುಗಳು ನಿನ್ನನ್ನು ಬಗ್ಗುಬಡಿಯಲು ಅಲ್ಲ, ಹೊರತಾಗಿ ನನ್ನ ಆತ್ಮಗೌರವವನ್ನು ಕಾಪಾಡಿಕೊಳ್ಳಲು, ಸ್ವಂತಿಕೆಯನ್ನು ಉಳಿಸಿಕೊಳ್ಳಲು ಮಾಡಿದ್ದು. ಅದರ ಬಗೆಗೆ ನನಗೆ ವಿಷಾದವಿದೆ. ನನ್ನ ಕೃತ್ಯಗಳು ತಿರುಗುಬಾಣವಾಗಿ ನನ್ನ ಶರೀರಕ್ಕೆ ಗಾಸಿಯಾಗಿರುವುದು ಅರಿವಾಗಿದೆ. ದೇಹ ಸವೆಯುತ್ತಿರುವುದು ಹಿಂಸಿಸುತ್ತಿದೆ. ಇಂಥ ಪ್ರಸಂಗದಲ್ಲಿ ದೈನ್ಯತೆಯಿಂದ ನಿನ್ನ ಹತ್ತಿರವಾಗಲು ಬಯಸಿದ್ದೇನೆ. ಆದರೆ ಅದು ಹೇಗೆಂಬುದು ನನಗೂ ಗೊತ್ತಿಲ್ಲ.
- ಈ ನವ ಬಾಂಧವ್ಯಕ್ಕೆ ಕರೆ ನನ್ನ ಒತ್ತಾಯವಲ್ಲ, ವಿನಂತಿ. ಫಲಾಪೇಕ್ಷೆ ಇಲ್ಲದೆ ಮಾಡುತ್ತಿದ್ದೇನೆ. ಇದಕ್ಕೆ ಸ್ಪಂದಿಸುವುದು ಬಿಡುವುದು ನಿನಗೆ ಸೇರಿದ್ದು. ನನ್ನ ವಿನಂತಿಯಲ್ಲಿ ಕಾಮಕ್ರಿಯೆಗೆ ಆಸ್ಪದ ಲವಲೇಶವೂ ಇಲ್ಲ.
- ಇನ್ನು, ಇದರ ಪರಿಣಾಮ ಏನು, ಹೇಗೆ? ನೋಡಿದಿರಾ, ಪ್ರತಿಫಲ ನಿರೀಕ್ಷೆ ಮಾಡುತ್ತಿದ್ದೀರಿ! ನಿಮ್ಮ ನೆಮ್ಮದಿ ಬಿಟ್ಟುಕೊಡುವುದರಲ್ಲಿದೆ. ಇಲ್ಲದಿದ್ದರೆ ಅದಕ್ಕಾಗಿ ಇನ್ನೊಂದು ಜನ್ಮ ಎತ್ತಬೇಕಾದೀತು: ತಯಾರಿದ್ದೀರಾ?

**ಸಂಪರ್ಕಕ್ಕೆ: 8494933888;**
**Email: vinod.chebbi@gmail.com**